**O.S. No.53/2023. PW-1.**

<u>ಪ್ರ. ಸಿವಿಲ್ ನ್ಯಾಯಾಧೀಶರು ಮತ್ತು ಪ್ರ:ದ:ನ್ಯಾ:ದಂ.,ರವರು, ಕಡೂರು.</u>

ದಿನಾಂಕ:**08.01.2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:</u> ಪ್ರತಿವಾದಿಯರ ಪರ ಶ್ರೀ ಎಂ ಎನ್ ವಕೀಲರಿಂದ:-

ನನಗೆ ಕನ್ನಡ ಓದಲು ಬರೆಯಲು ಅಲ್ಪ-ಸ್ವಲ್ಪ ಬರುತ್ತದೆ. ನಿಡಿ 1 ರಲ್ಲಿ ಸೈಟ್ ನಂಬರ್ 14 ಎಂದು ನಮಾದು ಇದೆ ಎಂದರೆ ಸರಿ. ನಾನು ಈ ದಾವೆಯನ್ನು ಸದರಿ ಸೈಟ್ ನಂ.14 ಕ್ಕೆ ಸಂಬಂಧಪಟ್ಟಂತೆ ಹಾಕಿರುತ್ತೇವೆ ಎಂದರೆ ಸರಿ. ನಾನು ಇತ್ತೀಚೆಗೆ ಅಂದರೆ 2 ವರ್ಷಗಳ ಹಿಂದೆ ಸೈಟ್ ನಂಬರ್ 14 ಕ್ಕೆ ಅಳತೆ ಮಾಡಿಸಲು ಹೋಗಿದ್ದೆ.

ಈಗ ನೋಡುತ್ತಿರುವ ಪೋಟೋ ಸೈಟ್ ನಂಬರ್ 14 ರದ್ದಾಗಿದ್ದು, ಅದರಲ್ಲಿ ಪ್ರತಿವಾದಿ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, ನನಗೆ ಗೊತ್ತಿಲ್ಲ, ನಾನು ಈಗ ಸದರಿ ಸೈಟ್ ಕಡೆಗೆ ಹೋಗಿಲ್ಲ. ನಿಡಿ 1 ರ ಪ್ರಕಾರವಾಗಿ ಪ್ರತಿವಾದಿಗೆ ಸದರಿ ಸೈಟ್ ನಂಬರ್ 14 ಮಂಜೂರಾದ ನಂತರ ಅವರು ಶೆಡ್ ನಿರ್ಮಿಸಿಕೊಂಡು ವಾಸವಾಗಿದ್ದಾರೆ ಎಂದರೆ ನಾನು ಹೋಗಿದ್ದಾಗ ಮತ್ತು ದಾವೆ ಹಾಕುವಾಗ ಸದರಿ ಶೆಡ್ ಇರಲಿಲ್ಲ, ಇತ್ತೀಚೆಗೆ ನಾನು ಹೋಗಿರುವುದಿಲ್ಲ. ನಾನು ದಾವೆ ಹಾಕುವ ಸಮಯದಲ್ಲಿ ಹಾಗೂ ನಾನು ಸೈಟ್ ಗೆ ಹೋಗಿದ್ದಾಗ ಶೆಡ್ ಇತ್ತು ಎಂದರೆ ಸರಿಯಲ್ಲ.

ಪುರಸಭೆಯಿಂದ ನನಗೆ ಸೈಟ್ ಮಂಜೂರಾಗಿತ್ತು ಎಂದು ಹೇಳುವ ಮಂಜೂರಾತಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಸುಮಾರು 20 ವರ್ಷಗಳ ಹಿಂದೆ ಮಂಜೂರಾಗಿತ್ತು, ನನ್ನ ಮನೆ ಮಳೆಯಿಂದ ಬಿದ್ದು ಹೋಗಿದ್ದರಿಂದ ಸದರಿ ದಾಖಲೆ ನಶಿಸಿರುತ್ತದೆ. ನನಗೆ 20 ವರ್ಷಗಳ ಹಿಂದೆ ಸೈಟ್ ಮಂಜೂರಾದ ಮಂಜೂರಾತಿ ಪತ್ರ ಕಳೆದುಹೋಗಿದೆ. ಮಂಜೂರಾತಿ ಪತ್ರ ಕಳೆದು/ನಶಿಸಿ ಹೋದ ವಿಚಾರವಾಗಿ ನಾನು ಪುರಸಭೆಗೆ ಅಥವಾ ಠಾಣೆಗೆ ದೂರು ನೀಡಿರುತ್ತೀರಾ ಎಂದರೆ ಸಾಕ್ಷಿಯು ಪುರಸಭೆಗೆ ದೂರು ನೀಡಿರುತ್ತೇನೆ. ಸದರಿ ದೂರು ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದಿಲ್ಲ. ನಾನು ನೀಡಿದ ದೂರು ಅರ್ಜಿಗೆ ಪುರಸಭೆಯವರು ಸ್ವೀಕೃತಿ ಯನ್ನು ನೀಡಿರುವುದಿಲ್ಲ, ಅವರು ನಿಮ್ಮ ಮಂಜೂರಾತಿಯಂತೆ ಖಾತೆ ಬದಲಾವಣೆಯಾಗಿರುತ್ತದೆ ಎಂದು ತಿಳಿಸಿರುತ್ತಾರೆ ಹಾಗೂ ಸಿಕ್ಕಿದಲ್ಲಿ ಕೊಡುತ್ತೇವೆ ಎಂದು ನನಗೆ ತಿಳಿಸಿರುತ್ತಾರೆ.

ನನಗೆ 20 ವರ್ಷಗಳ ಹಿಂದೆ ಸೈಟ್ ಮಂಜೂರಾಗಿತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಸೈಟ್ ಮಂಜೂರಾಗಿರುವುದಿಲ್ಲ ಎಂದರೆ ಸರಿಯಲ್ಲ. ಪುರಸಭೆಯಿಂದ ಸೈಟ್ ಮಂಜೂರಾಗಿದ್ದ ಪಕ್ಷದಲ್ಲಿ ಪುರಸಭೆಯ ರಿಜಿಸ್ಟರಿನಲ್ಲಿ ನಮೂದು ಇರುತ್ತದೆ, ಆದರೆ ನನಗೆ ಸೈಟ್ ಮಂಜೂರಾಗಿದೆ ಎಂದು ಹೇಳಲು ಯಾವುದೇ ರಿಜಿಸ್ಟರ್ / ದಾಖಲೆಯಲ್ಲಿ ನಮೂದು ಇಲ್ಲ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿಯ ತಂದೆಯ ಹೆಸರು ನಾಗಪ್ಪ ಎಂದು ಇರುವುದನ್ನು ದುರುಪಯೋಗಪಡಿಸಿಕೊಂಡು ನನ್ನ ತಂದೆಯ ಹೆಸರು ಸಣ್ಣ ನಾಗಪ್ಪ ಎಂದು ಇದ್ದರು ಸಹಃ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ನಾಗಪ್ಪ ಯಾನೆ ಸಣ್ಣ ನಾಗಪ್ಪ ಆಗಿರುತ್ತದೆ. ನನ್ನ ತಂದೆಯ ಹೆಸರು ನಾಗಪ್ಪ ಯಾನೆ ಸಣ್ಣನಾಗಪ್ಪ ಎಂದು ತೋರಿಸಲು ದಾಖಲೆಗಳು ಇವೆ.

ನಿಪಿ 1 ರಲ್ಲಿ ನನ್ನ ತಂದೆಯ ಹೆಸರು ಸಣ್ಣನಾಗಪ್ಪ ಎಂಬುದಾಗಿ ಮಾತ್ರ ಇದೆ ನಾಗಪ್ಪ ಎಂದು ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನತಂದೆಗೆ ಎರಡೂ ಹೆಸರಿನಿಂದಲೂ ಕರೆಯುತ್ತಿದ್ದಾರು. ನನ್ನ ಶಾಲಾ ದಾಖಲೆಗಳಲ್ಲಿ ಹಾಗೂ ಇತರೆ ದಾಖಲೆಗಳಲ್ಲಿ ನನ್ನ ತಂದೆಯ ಹೆಸರು ಕೇವಲ ಸಣ್ಣನಾಗಪ್ಪ ಎಂದು ಮಾತ್ರ ಇದೆ ಎಂದರೆ ಸರಿ. ನನ್ನ ತಂದೆಯ ಹೆಸರು ನಾಗಪ್ಪ ಎಂದು ಯಾವ ದಾಖಲೆಯಲ್ಲಿಯೂ ನಮೂದು ಇಲ್ಲ ಎಂದರೆ ಸರಿ. ನಾನು ಪುರಸಭೆಯವರಿಗೆ ನನ್ನ ತಂದೆಯ ಹೆಸರು ಸಣ್ಣನಾಗಪ್ಪ ಎಂಬುದನ್ನು ಮರೆಮಾಚಿ ಸುಳ್ಳು ಅರ್ಜಿ ನೀಡಿ ಸುಳ್ಳು ಖಾತೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿಗೂ ಹಾಗೂ ನನಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತು ಮಂಜೂರಾಗಿ ಹಕ್ಕು ಪತ್ರ ನೀಡಿದ್ದ ಪಕ್ಷದಲ್ಲಿ ಸದರಿ ಹಕ್ಕುಪತ್ರವನ್ನು ನ್ಯಾಯಾಲಯಕ್ಕೆ ನಾನು ಹಾಜರುಪಡಿಸುತ್ತಿದ್ದೆ, ನನಗೆ ಹಕ್ಕು ನೀಡಿರದ ಕಾರಣ ನಾನು ಹಾಜರಜುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಖಾತೆ ಬದಲಾವಣೆಗೆಂದು ಹಕ್ಕು ಪತ್ರವನುನ ಪುರಸಭೆಯವರಿಗೆ ನೀಡಿದ್ದಾಗ ಅವರು ಕಳೆದುಹಾಕಿರುತ್ತಾರೆ. ನಾನು ಪುರಸಭೇಯವರ ವಿರುದ್ಧ ಹಕ್ಕು ಪತ್ರ ಕಳೆದುಹಾಕಿದ ವಿಚಾರವಾಗಿ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಪುರಸಭೆಯವರು ಹಕ್ಕುಪತ್ರವನ್ನು ಕಳೆದು ಹಾಕಿರುತ್ತಾರೆ ಎಂಬುದನ್ನು ನನ್ನ ವಾದಪತ್ರದಲ್ಲಿ ಅಥವಾ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ದಾವಾ ಅನುಸೂಚಿ ಸ್ವತ್ತಿನ ಚೆಕ್ಕುಬಂಧಿಯಲ್ಲಿರುವ ಸ್ವತ್ತಿನ ಮಾಲೀಕರನ್ನು ಸಾಕ್ಷಿಯನ್ನಾಗಿ ಮಾಡಿಸಲು ನನಗೆ ತೊಂದರೆ ಇರುವುದಿಲ್ಲ. ದಾವಾ ಸ್ವತ್ತಿನ ಚೆಕ್ಕುಬಂಧಿಯ ಸ್ವತ್ತಿನ ಮಾಲೀಕ/ಸ್ವಾಧೀನ

ದಾರರು ಯಾರು ಯಾರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 3 ಖಾಲಿ ಸೈಟ್ ಗಳು ಇವೆ, ಒಂದು ಮನೆ ಇರುತ್ತದೆ, ಸದರಿ ಮನೆಯಲ್ಲಿ ವಾಸವಿರುವ ವ್ಯಕ್ತಿಯ ಹೆಸರು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಸ್ವಾಧೀನದಲ್ಲಿ ನಾನು ಎಂದಿಗೂ ಇರಲಿಲ್ಲ ಹಾಗೂ ಸದರಿ ಸ್ವತ್ತು ನನಗೆ ಸಂಬಂಧಪಟ್ಟಿರದ ಕಾರಣ ಅದರ ಚೆಕ್ಕುಬಂಧಿದಾರರ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಪ್ರತಿವಾದಿಗೆ ಸಂಬಂಧ ಪಟ್ಟದ್ದು ಎಂದರೆ ಸರಿಯಲ್ಲ. ಸದರಿ ಸ್ವತ್ತು 2 ನೇ ಪ್ರತಿವಾದಿಗೆ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ ನನಗೂ ಯಾವುದೇ ಸಂಬಂಧವಿಲ್ಲದಿದ್ದರೂ ಸಹಃ ನಾನು ಸುಳ್ಳು ಮಾಹಿತಿ ನೀಡಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ನನಗೆ ಮಂಜೂರಾಗಿತ್ತು ಎಂದು ಹೇಳುವ ಸೈಟ್ ಅನ್ನು ಅಳತೆ ಮಾಡಿಸಿರುತ್ತೀರಾ ಎಂರದೆ ಸಾಕ್ಷಿಯು ಅಳತೆ ಮಾಡಿಸಲು ಹೋಗಿದ್ದೆ, ಆಗ ಪ್ರತಿವಾದಿಯವರು ಅದು ನಮ್ಮ ಸೈಟ್ ಎಂದು ನನಗೆ ಅಳತೆ ಮಾಡಿಸಲು ಬಿಡದೆ ತೊಂದರೆಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಅಳತೆ ಮಾಡಿಸಲು ಹೋಗಿದ್ದೆ ಎಂದು ಹೇಳುವ ಸಮಯದಲ್ಲಿ ಪ್ರತಿವಾದಿಯವರು ಸದರಿ ಸೈಟಿನ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ನಾನು ನನ್ನ ತಂದೆಯ ಹೆಸರು ನಾಗಪ್ಪ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ದಾವಾ ಸ್ವತ್ತು ನನಗೆ ಅಥವಾ ನನ್ನ ಕುಟುಂಬದ ಸದಸ್ಯರ್ಯಾರಿಗೂ ಸಂಬಂಧಪಟ್ಟದ್ದಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸೇರಿದ ದಾವಾ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ನಾನು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-

C/C ಪ್ರ. ಸಿವಿಲ್ ನ್ಯಾಯಾಧೀಶರು ಮತ್ತು

ಪ್ರಃದಃನ್ಯಾಃದಂ.,ರವರು, ಕಡೂರು.